ಶ್ರೀ

# ಭಗವದ್ಗೀತೆ ಮತ್ತು ಪುರಂದರ ದಾಸರ ಕೀರ್ತನೆಗಳು

ಭಗವಾನ್ ವ್ಯಾಸ ಮಹರ್ಷಿಗಳು ಜಗತ್ತಿನ ಎಲ್ಲೆಡೆ ಜ್ಞಾನಭಾರತಿ ಪಸರಿಸುವಂತೆ ಎತ್ತರದಲ್ಲಿ ಹೊತ್ತಿಸಿಟ್ಟ ದಿವ್ಯ ಪ್ರದೀಪ 'ಭಗವದ್ಗೀತೆ'. ಇದು ವಿಶ್ವವಾಙ್ಮಯಕ್ಕೆ ವ್ಯಾಸರಿತ್ತ ಅಮೋಘ ಕೊಡುಗೆಯೂ ಆಗಿದೆ. ಈ ಪ್ರಪಂಚದಲ್ಲಿ ಮಾನವನಾಗಿ ಹುಟ್ಟಿದವನು ಹೇಗೆ ಬಾಳಬೇಕೆಂಬುದನ್ನು ಹೃದಯಂಗಮವಾಗಿ ತಿಳಿಸುವುದೇ ಭಗವದ್ಗೀತೆಯ ವೈಶಿಷ್ಟ್ಯ. ಸಮಸ್ತವೇದಾರ್ಥಸಾರ ಸಂಗ್ರಹ ಭೂತವಾದ ಈ ಶಾಸ್ತ್ರದಲ್ಲಿ ಭಕ್ತಿಯ ಒಂದು ಹೆಚ್ಚಳ ಎದ್ದು ಕಾಣುವಂತಹದಾಗಿದೆ.

ಕನ್ನಡದ ಶ್ರೇಷ್ಠ ಸಂತ ಕವಿ ಹಾಗೂ ವಾಗ್ಗೇಯಕಾರ ಶ್ರೀ ಪುರಂದರದಾಸರು ಹರಿನಾಮ ಸ್ಮರಣೆಯ ಹಿರಿಮೆ, ಭಕ್ತಹೃದಯದ ಅಂತರಂಗ ನಿವೇದನೆ, ಶ್ರೀ ಕೃಷ್ಣನ ಮನೋಹರವಾದ ಬಾಲಲೀಲೆ ಹಾಗೂ ಸುತ್ತಣ ಸಮಾಜಕ್ಕೆ ಮಾಡಿದ ತತ್ವಬೋಧೆ – ಈ ಎಲ್ಲವನ್ನು ಒಳಗೊಂಡಂತೆ ಅಸಂಖ್ಯಾತ ಕೀರ್ತನೆಗಳನ್ನೂ, ಸುಳಾದಿ ಉಗಾಭೋಗಗಳನ್ನೂ ರಚಿಸಿದ್ದಾರೆ. 'ಪಿಳ್ಳಾರಿ ಗೀತೆಗಳ' ಮೂಲಕ ಅವರು ಹಾಕಿದ ವಿಶೇಷ ಬುನಾದಿಯಿಂದಾಗಿ 'ಕರ್ನಾಟಕ ಸಂಗೀತ ಪಿತಾಮಹ'ನೆಂಬ ಕೀರ್ತಿಗೆ ಪಾತ್ರರಾದವರು. ಭಗವದ್ಗೀತೆಯಲ್ಲಿನ ಪರಮಪ್ರೇಮ ಸ್ವರೂಪವಾದ ಭಕ್ತಿಮಾರ್ಗಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡದ್ದಲ್ಲದೆ, ಸಾಮಾನ್ಯ ಜನತೆಗೂ ಆ ಭಕ್ತಿಯ ಹಿರಿಮೆ ಅರ್ಥವಾಗುವಂತೆ ಸರಳವಾದ ಆಡುನುಡಿಯಲ್ಲಿ ಬೋಧಿಸಿ, ಅವರಿಗೆ ಉದ್ಧಾರದ ಮಾರ್ಗವನ್ನು ತೋರಿಸಿದ ಮಹಾನುಭಾವ ಶ್ರೀ ಪುರಂದರದಾಸರು.

'ಕೆರೆಯ ನೀರನು ಕೆರೆಗೆ ಚೆಲ್ಲಿ। ವರವ ಪಡೆದವರಂತೆ ಕಾಣಿರೊ' ಎಂದು ಹೇಳಿ ಶ್ರೀ ಹರಿಯ ಕರುಣೆಯಿಂದ ದೊರಕಿದ ಭಾಗ್ಯವನ್ನು ಅವನಿಗೇ ಸಮರ್ಪಿಸಿ ಧನ್ಯರಾಗುವ ಬಗೆಯನ್ನು ಪಿಳ್ಳಾರಿ ಗೀತೆಯಿಂದಲೇ ತಿಳಿಸಿಕೊಡುತ್ತಾರೆ ಶ್ರೀ ದಾಸರು. ಹರಿಯುವ ನೀರು, ಉರಿಯುವ ಸೂರ್ಯ, ಬೀಸುವ ಗಾಳಿ, ಸುರಿಯುವ ಮಳೆ, ತಂಪೆರೆಯುವ ಚಂದ್ರ – ಇವೆಲ್ಲವೂ ಶ್ರೀ ಹರಿಯ ಕರುಣೆಯಲ್ಲದೆ ಬೇರೇನು? ಇವುಗಳನ್ನೆಲ್ಲ ಅನುಭವಿಸುವ ಮನುಜ ಕೃತಜ್ಞತೆಯಿಂದ ಆ ದೇವದೇವನಿಗೆ ಕೊಡಬಹುದಾದರೂ ಏನನ್ನು? ಅದನ್ನು ಸ್ವಾಮಿಯೇ ಭಗವದ್ಗೀತೆಯಲ್ಲಿ ಅಪ್ಪಣೆ ಕೊಡಿಸುತ್ತಾನೆ. ''ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾಪ್ರಯಚ್ಛತಿ''– ಯಾವುದನ್ನಾದರೂ ಸರಿಯೆ, ಭಕ್ತಿಭಾವದಿಂದ ಸಮರ್ಪಿಸಿದರೆ ಆತ ಖಂಡಿತವಾಗಿಯೂ ಸ್ವೀಕರಿಸುತ್ತಾನೆ. ಅದನ್ನೇ ಪುರಂದರದಾಸರು ''ಒಂದು ದಳ ಶ್ರೀ ತುಳಸಿ ಬಿಂದು ಗಂಗೋದಕವ। ಇಂದಿರಾ ರಮಣಗರ್ಪಿತವೆನ್ನುತ। ಒಂದೆ ಮನದೊಳು ಸಿಂಧು ಶಯನ, ಮುಕುಂದ ಎಂದರೆ'' ಸಾಕು. ಅಂತಹ ಭಕ್ತರ ಮನೆಯ ತೊತ್ತಿನಂತೆ ನಡೆದುಕೊಳ್ಳುತ್ತಾನೆ'' ಶ್ರೀಹರಿ ಎನ್ನುತ್ತಾರೆ. ಪರಮಾತ್ಮ ಭಕ್ತಪರಾಧೀನ. ಬ್ರಹ್ಮಾಂಡಕ್ಕೊಡೆಯನಾದರೂ ನಿಗರ್ವಿ. ಹೂವನ್ನು ತರುವವರ ಮನೆಗೆ ಹುಲ್ಲನ್ನಾದರೂ ಹೊತ್ತು ತರುತ್ತಾನೆ! ಭಕ್ತ-ಭಗವಂತರ ನಡುವಣ ಬಾಂಧವ್ಯವನ್ನು ದಾಸರು ಬಣ್ಣಿಸುವ ರೀತಿಯಿದು! ಆದರೆ ಮನುಷ್ಯನ ಮನಸ್ಸು ಅತಿ ಚಂಚಲ. ಅದನ್ನು ಒಂದೆಡೆ ನಿಲ್ಲಿಸುವುದಾದರೂ ಹೇಗೆ? ಅರ್ಜುನನಿಗೂ ಆ ಕಷ್ಟ ತಪ್ಪಿದ್ದಲ್ಲ. ''ಚಂಚಲಂ ಹಿಮನ, ಕೃಷ್ಣ! ಪ್ರಮಾಥಿ ಬಲವದ್ದೃಢಮ್''– ಎಂದಾಗ ಶ್ರೀಕೃಷ್ಣ ಅವನನ್ನು ಸಮಾಧಾನ ಪಡಿಸುತ್ತಾನೆ. ''ಅಸಂಶಯಂ ಮಹಾಬಾಹೋ! ಮನೋದುರ್ನಿಗ್ರಹಂ ಚಲಂ'', ಆದರೆ ಸತತ ಅಭ್ಯಾಸದಿಂದ ಅದನ್ನು ಹದಗೊಳಿಸಲು ಸಾಧ್ಯವಾಗುತ್ತದೆ'' ಎಂದು. ಇಂತಹ ಮನಸ್ಸನ್ನು ಕುರಿತು 'ಹರಿದಾಡುವಂಥ ಮನವ ನಿಲ್ಲಿಸುವುದು ಬಲು ಕಷ್ಟ', 'ಮನವ ಶೋಧಿಸಬೇಕು ನಿಚ್ಚ', ಮನಸಿನ ಮುಸುರೆ ತೊಳೆಯಬೇಕು' ಎಂದು ಅನೇಕ ರೀತಿಯಲ್ಲಿ ದಾಸರೂ ಸಹ ಪರಿತಪಿಸುತ್ತಾರೆ. ಇಂತಹ ಸಂದರ್ಭದಲ್ಲಿ ಸಂತತ ಹರಿಸ್ಮರಣೆ ಹಾಗೂ ಸತ್ಸಂಗಗಳು ಭಕ್ತರ ನೆರವಿಗೆ ಬಿರುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ, ಮಾಡುವ ಎಲ್ಲ ಕರ್ಮಗಳಿಗೂ 'ಕೃಷ್ಣಾರ್ಪಣ'ವೆಂಬ ಮುದ್ರೆಯೊತ್ತಿದರೆ ಸಾಕು, ಹಾದಿ ಸುಗಮವಾಗುತ್ತದೆ ಎಂದು ಮನಗಾಣುತ್ತಾರೆ ದಾಸರು.

''ಯತ್ಕರೋಷಿ ಯದಶ್ನಾಸಿ ಯಜ್ಜುಹೋಸಿ ದದಾಸಿಯತ್
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಂ'' ಎಂಬ

ಭಗವನ್ನುಡಿಯಲ್ಲಿ ಅಚಲ ನಂಬುಗೆಯನ್ನಿಟ್ಟುಕೊಂಡು. ''ಸಕಲವೆಲ್ಲವು ಶ್ರೀ ಹರಿಸೇವೆ ಎನ್ನಿ'' ಎಂದು ಎಲ್ಲರಿಗೂ ಬೋಧಿಸುತ್ತಾರೆ.

'ನುಡಿವುದೆಲ್ಲವು ನಾರಾಯಣನ ಕೀರ್ತನೆಯೆನ್ನಿ
ನಡೆವುದೆಲ್ಲವು ದೇವರ ಯಾತ್ರೆಯೆನ್ನಿ
ಕೊಡುವ ದಾನವು ಕಾಮಜನಕ ಗರ್ಪಿತವೆನ್ನಿ
ಎಡೆಯ ಅನ್ನವು ಹರಿಯ ಪ್ರಸಾದವೆನ್ನಿ' ಎಂದು ಮುಂತಾಗಿ

ಅನೇಕ ಚರಣಗಳಲ್ಲಿ ಹಾಡಿ, ಸರ್ವಸಮರ್ಪಣ ಭಾವದಿಂದ ಸಾರ್ಥಕತೆಯನ್ನು ಹೊಂದುವ ರೀತಿಯನ್ನು ತಿಳಿಸಿಕೊಡುತ್ತಾರೆ.

ಭಗವದ್ಗೀತೆಯ ಅನೇಕ ಅಧ್ಯಾಯಗಳಲ್ಲಿ ಆತ್ಮೋದ್ಧಾರದ ಮಾರ್ಗದಲ್ಲಿಸಾಧಕನ ಸ್ವಭಾವ ನಡೆ ನುಡಿಗಳು ಹೇಗಿರಬೇಕೆಂಬುದನ್ನು ವಿವರಿಸಲಾಗಿದೆ. ಅದೆಲ್ಲವನ್ನೂ ಒಂದೇ ಕೀರ್ತನೆಯಲ್ಲಿ ಕ್ರೋಢೀಕರಿಸಿದಂತೆ ಕಾಣುವ ದಾಸರ ರಚನೆ

'ಸುಮ್ಮನೆ ಬರುವುದೆ ಮುಕ್ತಿ( ಭಕ್ತಿ)?
'ಮ್ಮ ಅಚ್ಯುತಾನಂತನ ನೆನೆಯದೆ ಭಕ್ತಿ( ಮುಕ್ತಿ)'

ಮನದಲಿ ಧೃಢವಿರಬೇಕು, ಅನುಮಾನವನು ಬಿಡಬೇಕು, ಕಾಮಕ್ರೋಧವ ಬಿಡಬೇಕು, ಹೇಮದಾಪೆಯ ಸುಡಬೇಕು, ಸಂದಣಿಗಳ ಬಿಡಬೇಕು... ಕೇಳುತ್ತಾ ಹೋದಂತೆ ಭಗವದ್ಗೀತೆಯ ಸಾರವೆಲ್ಲವೂ ಇಲ್ಲೇ ಸಂಗ್ರಹವಾಗಿರುವುದು ಕಂಡು ಬರುತ್ತದೆ.

ಭಕ್ತನಾದವನು ಸಂಸಾರದಲ್ಲಿದ್ದೂ ಇಲ್ಲದಂತೆ ಇರುವ ಪರಿಯನ್ನು ದಾಸರು

'ಪಕ್ಷಿ ಅಂಗಳದಲ್ಲಿ ಬಂದು ಕೂತಂತೆ! ಆ ಕ್ಷಣದಲ್ಲಿ ಹಾರಿ ಹೋದಂತೆ,

ಮಕ್ಕಳಾಡಿ ಮನೆ ಕಟ್ಟಿದಂತೆ! ಆಟ ಸಾಕೆಂದು ಅಳಿಸಿ ಹೋದಂತೆ',

'ಹಾಲಿಗೆ ಇರಬೇಕು ಸಂಸಾರದಲ್ಲಿ' ಎಂದು ಬಹಳ ಸರಳವೂ ಸುಂದರವೂ ಆದ ಉಪಮಾನಗಳಿಂದ ತಿಳಿಯ ಹೇಳುತ್ತಾರೆ.

ಪುರಂದರದಾಸರ ಪ್ರಖ್ಯಾತ ಕೃತಿ 'ಸಕಲಗ್ರಹಬಲ ನೀನೆ ಸರಸಿಜಾಕ್ಷ ಕೃತಿಯನ್ನು ಕೇಳಿ ಮೆಚ್ಚದವರಾರು? 'ಋತು ಕಾಲವು ನೀನೇ, ವ್ರತ ದಿನಂಗಳು ನೀನೇ, ಕೃತುವು ಸಂಧ್ಯಾದಿ ಕರಣಗಳು ನೀನೇ, ದಿವರಾತ್ರಿಯು ನೀನೇ, ನವ ವಿಧಾನವು ನೀನೇ, ಭವರೋಗ ಹರ ನೀನೇ, ಭೇಷಜನು ನೀನೇ' ಎಂದು ಆ ಶ್ರೀ ಹರಿಯನ್ನೇ ಬಲವಾಗಿ ನಂಬಿ, 'ಮುಚ್ಚಿತ್ತಾ ಮದ್ಗತ ಪ್ರಾಣಾ.. ಶ್ಲೋಕಕ್ಕೆ ಚತು ತಪ್ಪದಂತೆ, ಅವನಲ್ಲಿಯೇ ಮನಸ್ಸಿಟ್ಟು ಅವನಲ್ಲಿಯೇ ಪ್ರಾಣವಿಟ್ಟು ಅವನನ್ನೇ ಸ್ಮರಿಸಿ ಸ್ಮರಿಸಿ ಸಂತೋಷಿಸಿ ಆನಂದ ಪರಶರಾಗುತ್ತಾರೆ.

'ಯದ್ಯದ್ವಿಭೂತಿ ಮತ್ತತ್ತ್ವ ಶ್ರೀ ಮದೂರ್ಜಿತ ಮೇವವಾ
ತತ್ತ ದೇವಾವಗಚ್ಛತ್ವ ಮಮತೇಜೋಂಶ ಸಂಭವಮ್'

ಎಂಬ ಭಗವದ್ವಾಣಿಯಂತೆ, ನಾವು ಶ್ರೀ ಪುರಂದರದಾಸರಲ್ಲಿಯೂ ಆ ತೇಜೋಂಶವನ್ನು ಕಾಣುತ್ತೇವೆ.

ಭಗವದ್ಗೀತೆಯ ಕಲಶ ಪ್ರಾಯದಂತಿರುವ ಅಧ್ಯಾಯವೆಂದರೆ 'ವಿಶ್ವರೂಪದರ್ಶನಯೋಗ', ಪುರಂದರದಾಸರು ಅರ್ಜುನನ ಜಾಗದಲ್ಲಿ ನಿಂತು ಹಾಡುತ್ತಾರೆ. 'ಹರಿಯೇ ಸರ್ವೋತ್ತಮ, ಹರಿಯೇ ಪರದೈವವು' ಕೃತಿಯನ್ನು, ಚರಣ ಭಾಗದಲ್ಲಿ 'ವಿಶ್ವತೋಮುಖ ನೀನೇ, ವಿಶ್ವತಶ್ಚಕ್ಷು ನೀನೇ, ವಿಶ್ವತೋ ಬಾಹು, ವಿಶ್ವಪಾದನು ನೀನೇ, ವಿಶ್ವೋದರ ನೀನೇ ವಿಶ್ವವ್ಯಾಪನು ನೀನೇ ವಿಶ್ವನಾಟಕ ಸೂತ್ರಧಾರಿಯೇ ವಿಷ್ಣುವೇ!' ಆಗಮನಿಗಮ ಪುರಾಣಗಳಿಗೆ ಸರಿಸಾಟಿಯಾಗಿ ಶ್ರೀ ಹರಿಯನ್ನು ಕೊಂಡಾಡುತ್ತಾರೆ. ಹಾಗೆಯೇ 'ನಂಬಿಕೆಟ್ಟವರಿಲ್ಲವೋ ರಂಗಯ್ಯನ, ಅಂಬುಜನಾಭನ ಅಖಿಲಲೋಕೇಶವ ನಂಬಿ ಕೆಟ್ಟವರಿಲ್ಲವೋ'' ಎಂದು ಸಂಪೂರ್ಣ ಭರವಸೆಯನ್ನು ನೀಡುತ್ತಾರೆ ಸದ್ಗುರು ಶ್ರೀ ಪುರಂದರದಾಸರು.

*ಓಂ ತತ್ಸತ್ ಶ್ರೀ ಕೃಷ್ಣಾರ್ಪಣಮಸ್ತು.*

- ವಿಜಯಾ ಮೂರ್ತಿ

ಶ್ರೀ

(1) ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ...

- ಪುರಂದರದಾಸ.

ಗುರುಲೇಕ ಎಟುವಂಟಿ ಗುಣಿಕಿದೆಲಿಯಗಬೋದು

- ತ್ಯಾಗರಾಜ

(2) ಕೇಳನೋ ಹರಿ ತಾಳನೋ ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ...

- ಪುರಂದರದಾಸ

ಸಂಗೀತ ಜ್ಞಾನಮು ಭಕ್ತಿವಿನಾ
ಸನ್ಮಾರ್ಗಮು ಗಲದೇ ಓ ಮನಸಾ...

- ತ್ಯಾಗರಾಜ

(3) ಸಕಲ ಗ್ರಹಬಲ ನೀನೆ ಸರಸಿಜಾಕ್ಷ
ನಿಖಿಳ ರಕ್ಷಕ ನೀನೆ ವಿಶ್ವವ್ಯಾಪಕನು

- ಪುರಂದರದಾಸ

ಗ್ರಹಬಲಮೇಮಿ ಶ್ರೀ ರಾಮಾನುಗ್ರಹ ಬಲಮೇ ಬಲಮು..

- ತ್ಯಾಗರಾಜ

(4) ಮನವ ನಿಲಿಸುವುದು ಬಹು ಕಷ್ಟ ಹರಿದಾಡುವಂಥ...

-ಪುರಂದರದಾಸ

ಮನಸು ನಿಲ್ಪ ಶಕ್ತಿಲೇಕ ಪೋತೆ
ಮಧುರಘಂಟ ವಿರುಲ ಪೂಜ ಏಮಿ ಜೇಯುನು...

- ತ್ಯಾಗರಾಜ

(5) ಈ ಸಿರಿಯ ನಂಬಿ ಹಿಗ್ಗಲಿ ಬೇಡ ಮನವೆ
ವಾಸುದೇವನ,ಭಜಿಸಿ ಸುಖಿಯಾಗು ಮನವೇ...

- ಪುರಂದರದಾಸ

ನಿಧಿ ಚಾಲ ಸುಖಮಾ? ರಾಮುನಿ ಸನ್ನಿಧಿ ಸೇವ ಸುಖಮಾ?
ನಿಜಮುಗ ಬಲ್ಕು ಮನಸಾ... - ತ್ಯಾಗರಾಜ

(6) ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ!

- ಪುರಂದರದಾಸ

ನಾಮ ಕುಸುಮ ಮುಲಚೆ ಪೂಜಿಂಚೆ
ನರಜನ್ಮಮೆ ಜನ್ಮಮು ಮನಸಾ

- ತ್ಯಾಗರಾಜ

(7) ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ
ಪದುಮನಾಭನ ಪಾದ ಭಜನೆ ಸುಖವಯ್ಯ...

- ಪುರಂದರದಾಸ

ಇದೇ ಭಾಗ್ಯಮು ಗಾಕ-ಏಮಿ ಯುನ್ನದಿರಾ? ರಾಮ!
ಸದಾ ನೀ ಪಾದ ಪಂಕಜ ಮುಲನು ಸಮ್ಮತಮುಗ ಪೂಜಿಂಚುವಾರಿಕಿ

- ತ್ಯಾಗರಾಜ

(8) ಮರೆಯಬೇಡ ಮನವೆ ನೀನು ಹರಿಯ ಸ್ಮರಣೆಯ

- ಪುರಂದರದಾಸ

ಮನಸಾ! ಶ್ರೀರಾಮ ಚಂದ್ರುನಿ - ಮರವಕೆ - ಏ ಮರಕೇ ಓ...

- ತ್ಯಾಗರಾಜ

(9) ಯಾಕೆ ನಿರ್ದಯನಾಗುವಿ ರಂಗಯ್ಯ ರಂಗ
ಯಾಕೆ ನಿರ್ದಯನಾಗುವಿ?

- ಪುರಂದರದಾಸ

ಎಂದುಕು ನಿರ್ದಯ ಎವರುನ್ನಾರುರಾ?
ಇಂದು ನಿಭಾನನ! ಇನಕುಲ ಚಂದನ!

- ತ್ಯಾಗರಾಜ

(10) ತಾಳಬೇಕು. ತಕ್ಕಮೇಳ ಬೇಕು

- ಪುರಂದರದಾಸ

ಸೊಗುಸುಗಾ ಮೃದುಂಗ ತಾಳಮು

- ತ್ಯಾಗರಾಜ

(11) ಉದರವೈರಾಗ್ಯವಿದು! ನಮ್ಮ ಪದುಮನಾಭನಲಿ
ಲೇಶ ಭಕುತಿಯಿಲ್ಲ!

- ಪುರಂದರದಾಸ

ತೆಲಿಯಲೇರು, ರಾಮ!, ಭಕ್ತಿ ಮಾರ್ಗಮುನು

- ತ್ಯಾಗರಾಜ

(12) ಇನ್ನೂ ದಯಬಾರದೆ ದಾಸನ ಮೇಲೆ?

- ಪುರಂದರದಾಸ

ಏಲ ನೀ ದಯರಾದು? ಪರಾಕು ಜೇಸೇದವೇಲ!

- ತ್ಯಾಗರಾಜ